ಆ) ಕೊಡಗು ಜಿಲ್ಲೆಗೆ ವಿತರಣೆ ಮಾಡಿರುವ ಹಣದ ವಿವರ

	೧೯೮೪-೮೫	೧೯೮೫-೮೬	೧೯೮೬-೮೭
೧) ಮಡಿಕೇರಿ	೧.೦೫ ಲಕ್ಷ	೦.೬ಲಕ್ಷ	೧.೩೦ಲಕ್ಷ
೨) ವಿರಾಜಪೇಟೆ	೧.೦೦ ಲಕ್ಷ	೦.೬ಲಕ್ಷ	೨.೦೦ಲಕ್ಷ
೩) ಸೋಮವಾರಪೇಟೆ	೧.೦೦ಲಕ್ಷ	೦.೮ಲಕ್ಷ	೧.೭ಲಕ್ಷ

ಇ) ಕೊಡಗು ಜಿಲ್ಲೆಯಲ್ಲಿ ಶಾಲಾ ಕಟ್ಟಡಗಳಿಗೆ ಹೊಂದಿಕೊಂಡಂತಿರುವ ಜಾಗಗಳ ಪೈಕಿ ಕೆಲವು ಕಂದಾಯ ಇಲಾಖೆಗೂ ಮತ್ತು ಕೆಲವು ವಿದ್ಯಾ ಇಲಾಖೆಗೂ ಸೇರಿರುತ್ತವೆ.

ಈ) ವಿದ್ಯಾ ಇಲಾಖೆಗೆ ಸೇರಿರುವ ಶಾಲಾ ಕಟ್ಟಡಗಳ ಸಂಖ್ಯೆ:

೧) ಮಡಿಕೇರಿ ೨೫ ಶಾಲೆಗಳು
೨) ಸೋಮವಾರಪೇಟೆ ೧೯ ಶಾಲೆಗಳು
೩) ವಿರಾಜಪೇಟೆ ೬೧ ಶಾಲೆಗಳು

ಉ) ಖಾಲಿ ಜಾಗವನ್ನು ಶಾಲೆಗಳಿಗೆ ಬಿಟ್ಟು ಕೊಡುವ ವ್ಯವಸ್ಥೆಯನ್ನು ಇದುವರೆಗೂ ಮಾಡಿರುವುದಿಲ್ಲ. ೧೯೮೭-೮೮ನೇ ಸಾಲಿನಿಂದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ಜಿಲ್ಲಾ ಪರಿಷತ್ತಿಗೆ ವರ್ಗಾಯಿಸಿಗೆ ಪಹಿಸಲಾಗಿದೆ. ಇಂತಹ ವಿಷಯಗಳ ಬಗ್ಗೆ ಅವರೇ ಕ್ರಮ ಕೈಗೊಳ್ಳುತ್ತಾರೆ.

ಕೃಷಿ ಪದವೀಧರರು ಹಾಗೂ ಕೃಷಿ ಸಹಾಯಕರ ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡುವುದು

೨೯೫ ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).— ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಲಿ ಇರುವ ಕೃಷಿ ಸಹಾಯಕರ ದರ್ಜೆ ಹಾಗೂ ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡಲು ಸರ್ಕಾರವು ಯೋಚಿಸಿದೆಯೇ ?

ಆ) ಸರ್ಕಾರದ ಆಜ್ಞೆ ಸಂಖ್ಯೆ: ಎಎಹೆಚ್:೧೫೫:ಎಡಿಒ ೮೧ ದಿನಾಂಕ ೧೧-೪-೧೯೮೪ರ ಪ್ರಕಾರ ನಿಗದಿಗೊಳಿಸಿರತಕ್ಕ ಶೇಕಡ ೧೦ರ ಕೋಟಾವನ್ನು ತಿದ್ದುಪಡಿ ಮಾಡುವ ಆಲೋಚನೆ ಇದೆಯೇ ?

ಇ) ಹಾಗಿದ್ದಲ್ಲಿ ಸರ್ಕಾರದ ಆದೇಶದ ಸಂಖ್ಯೆ ಎಎಹೆಚ್:೭೭:ಎಎಸ್‌ಇ ೮೧, ದಿನಾಂಕ ೩೧-೧೨-೮೧ರಂತೆ ೨೦ ಬಿ. ಎಸ್. ಸಿ ಪದವಿ ಪಡೆದಿರುವ ೪೦ ಕೃಷಿ ಸಹಾಯಕರುಗಳು ಮತ್ತು ಸರ್ಕಾರದ ಆದೇಶ ಎಎಹೆಚ್.೧೯೦ ಎಎನ್‌ಇ ೮೪ ದಿನಾಂಕ ೨೬-೧೧-೧೯೮೫ರ ಆದೇಶದಂತೆ ದ್ವಿತೀಯ ವರ್ಷದ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ೧೭ ಮಂದಿ ಕೃಷಿ ಸಹಾಯಕರುಗಳಿಗೆ ಬಡ್ತಿ ನೀಡುವ ಬಗ್ಗೆ ಇರತಕ್ಕ ಶೇಕಡಾ ೧೦ರ ಕೋಟಾವನ್ನು ಕಡ್ಡಾಯವಾಗಿ ಅನುಸರಿಸಲಾಗುವುದೇ ?

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಸಚಿವರು).—

ಅ) ಹೌದು.

ಆ) ಹೌದು.

ಇ) ಆ ವೇಳೆಯಲ್ಲಿ ಅನ್ವಯಿಸುವ ನಿಯಮಗಳು ಅನುಸರಿಸಲಾಗುವುದು.